ಬಾಲ್ಯವಿವಾಹದಂತ ಅಪಾಯಕಾರಿ ಆಚರಣೆಗಳನ್ನು ನೆಲಸಮ ಮಾಡುವುದರ ಮೂಲಕ ನೆರವಾಗಬಹುದು. ಗಂಡಸರಿಗೆ ಇದು ಪರೀಕ್ಷೆಯ ಕಾಲ.'ಸ್ತ್ರೀ ಪ್ರಜ್ಞೆ'ಯನ್ನು ತಡವಿಕೊಳ್ಳದೆ ಎಡತಾಕದೆ ಮುಂದೆ ಹೋಗಲು ಸಾಧ್ಯವೇ ಇಲ್ಲ

**◆ ಸಾಂಸ್ಕೃತಿಕವಾಗಿ ನಿಮ್ಮಲ್ಲಿ ಫೈಜ್ ಅಹಮದ್ ಫೈಜ್,ಮಲಾಲಾ ಯೂಸೂಫ್ ಜ್ಹಾಯ್,ಶಾಕಿರಾ ಪರ್ವೀನ್ ರಂತಹ ಅತ್ಯುತ್ತಮ ಉದಾಹರಣೆಗಳಿರುವಾಗ,ಹೊಸ ತಲೆಮಾರಿನ ನೀವು,ಈ ಕಾಲದ ಆಕ್ಟಿವಿಸ್ಟ್ ಆಗಿಯಷ್ಟೇ ಅಲ್ಲ ಕವಿಯಾಗಿ ಯಾವ ಹೊಸ ಮಾತು (ಕಾವ್ಯದಲ್ಲಿ ಹೊಸತನ ಅನ್ನುತ್ತಾರಲ್ಲ) ಆಡಲು ಬಯಸುತ್ತೀರಿ?**

ಹೊಸ ತಲೆಮಾರಿನ ಕವಯಿತ್ರಿಯಾಗಿ ನಾನು ನೂತನ ದೃಷ್ಟಿಕೋನಗಳನ್ನ ಮತ್ತು ಧ್ವನಿಗಳನ್ನ ಕಾವ್ಯ ಪ್ರಪಂಚಕ್ಕೆ ಕೊಡ ಬಯಸುತ್ತೇನೆ. ಮೌಲಾನ ರೂಮಿ, ಖಲೀಲ್ ಗಿಬ್ರಾನ್ ಮತ್ತು ಮಾಯ ಎಂಜೆಲೊ ರಂತಹ ಕವಿಗಳಿಂದ ನಾನು ಸ್ಫೂರ್ತಿಯ ಎಳೆಗಳನ್ನ ಪಡೆದಿದ್ದೇನೆ. ಜೊತೆಗೆ ನನ್ನದೇ ಆದ ವಿನೂತನ ಶೈಲಿ ಮತ್ತು ವಸ್ತು-ವಿಷಯಗಳನ್ನು ಕೂಡ ನನ್ನ ಕೃತಿಗಳಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಹೆಣ್ಣಿಗೆ ಯಾರೂ ಸೋಕಾಲ್ಡ್ ಅಧ್ಯಾತ್ಮದ ಪಾಠಗಳನ್ನು ಹೇಳಿಕೊಡಬೇಕಾಗಿಲ್ಲ.ಅದು ಅವಳ ಉಸಿರಿನಷ್ಟೇ, ವರ್ತನೆಯಷ್ಟೇ ಸಹಜ. ನಮಗೆ ಸರಿ ಅನಿಸಿದಾಗ ನಾವು ಪ್ರೀತಿಯಲ್ಲೂ ಪಾಲ್ಗೊಳ್ಳುತ್ತೇವೆ;ಕ್ರಾಂತಿಯಲ್ಲೂ!

**◆ ಮಕ್ಕಳ ಹಕ್ಕುಗಳ ನ್ಯಾಯವಾದಿಯಾಗಿ ನಿಮ್ಮ ಹೋರಾಟದ ಹಾದಿಯನ್ನು ನೀವು ಈಗಾಗಲೇ ಸ್ಪಷ್ಟಪಡಿಸಿಕೊಂಡಿದ್ದೀರಿ. ಆದರೆ ಕಾವ್ಯಲೋಕದಲ್ಲಿ ನಿಮ್ಮ ದಾರಿ ಯಾವುದು? ಅದಕ್ಕೆ ಮಾಡಿಕೊಳ್ಳುತ್ತಿರುವ ಸಿದ್ಧತೆಗಳೇನು? ಸಿದ್ಧಾಂತಗಳೇನು? ನಮ್ಮ ಓದುಗರಿಗೆ ತಿಳಿಸಿ ಕೊಡುವಿರಾ?**

ಕಾವ್ಯ ಪ್ರಪಂಚದಲ್ಲಿ ನಾನು ಬಗೆ ಬಗೆಯ ವಸ್ತು ವಿಷಯಗಳನ್ನು ಓದಲು ಮತ್ತು ವಿವಿಧ ಮೂಲಗಳಿಂದ ಸ್ಫೂರ್ತಿಯನ್ನು ಪಡೆದುಕೊಳ್ಳಲು ಯಾವಾಗಲೂ ಶ್ರಮಿಸುತ್ತೇನೆ. ನೈಜತೆ, ಬಾಳಿನ ಹಂಬಲ (ಪ್ಯಾಶನ್), ಮತ್ತು ಧನಾತ್ಮಕ ಬದಲಾವಣೆಗಾಗಿ ಪ್ರಾಮಾಣಿಕವಾಗಿ ಧ್ವನಿ ಎತ್ತುವುದು ನನ್ನನ್ನು ಮುನ್ನಡೆಸುವ ಸಿದ್ಧಾಂತಗಳು.

**◆ ವ್ಯಕ್ತಿತ್ವ ವಿಕಸನದ ಪ್ರಕ್ರಿಯೆಯಲ್ಲಿ, ಧಾರ್ಮಿಕ ಶಿಕ್ಷಣದ ಆಚೆಗೆ ಇಂಗ್ಲಿಷ್ ಕಲಿಕೆ ನಿಮಗೆ ಬಿಡುಗಡೆಯ ದಾರಿ ಕೊಟ್ಟಿತಾ ಅಥವಾ ಕಾವ್ಯದ ಕಲಿಕೆನಾ?**

ಇಂಗ್ಲಿಷ್ ವಿದ್ಯಾಭ್ಯಾಸ ಮತ್ತು ಕಾವ್ಯದ ಕಲಿಕೆ ನನ್ನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮತ್ತು ಬಿಡುಗಡೆಯ ಕಡೆಗಿನ ನನ್ನ ಪಯಣದಲ್ಲಿ ಮಹತ್ವದ ಪಾತ್ರ ವಹಿಸಿವೆ. ನನ್ನಲ್ಲಿ ವಿಶ್ವ ದೃಷ್ಟಿಕೋನವನ್ನು ಕಟ್ಟಿಕೊಟ್ಟ ಮತ್ತು ನ್ಯಾಯಕ್ಕಾಗಿ ಮಾತನಾಡುವ ಧೈರ್ಯ ಕೊಟ್ಟಂತಹ ಹೊಸ ವಿಷಯಗಳನ್ನ, ದೃಷ್ಟಿಕೋನಗಳನ್ನ, ಮತ್ತು ಅಭಿವ್ಯಕ್ತಿಯ ಮಜಲುಗಳನ್ನ ಶೋಧಿಸುವುದಕ್ಕೆ ಅವು ಅನುವು ಮಾಡಿಕೊಟ್ಟಿವೆ.

**◆ ನಿಮ್ಮ ಪ್ರಕಾರ ತೃತೀಯ ಜಗತ್ತಿನ ಪೋಷಕರು ಹಾಗೂ ಯುವ ಜನತೆಯ ಮುಂದಿರುವ ಬಹುದೊಡ್ಡ ಸವಾಲುಗಳೇನು ಅನ್ನಿಸ್ತಾ ಇದೆ?**

ತೃತೀಯ ಜಗತ್ತಿನ ಪೋಷಕರು ಮತ್ತು ಯುವ ಜನತೆ ಪ್ರಸ್ತುತ ಎದುರಿಸುತ್ತಿರುವ ಸಂದಿಗ್ಧ ಸವಾಲುಗಳಲ್ಲಿ ಬಡತನ, ಶಿಕ್ಷಣದ ಕೊರತೆ, ಅಭಿವೃದ್ಧಿಗೆ ಅವಕಾಶಗಳ ಕೊರತೆ ಸೇರಿವೆ. ಈ ಸವಾಲುಗಳ ಕುರಿತು ಹೆಚ್ಚೆಚ್ಚು ಮಾತನಾಡುವ ಹಾಗೂ ಸಮಾನತೆಯ ಆಶಯವುಳ್ಳ ಒಳಗೊಳ್ಳುವಿಕೆಯ ಸಮಾಜವನ್ನು ಸೃಷ್ಟಿಸುವುದು ಮುಖ್ಯ.

ಆದರಿದು ಸುಲಭದ ಕಾರ್ಯವಲ್ಲ,ಅದಕ್ಕೆ ಅಪಾರವಾದ ತಾಳ್ಮೆ ಮತ್ತು ಮನುಷ್ಯರನ್ನು ಪ್ರೀತಿಸುವ ಗುಣಬೇಕು.

**◆ ಇಂಡಿಯಾ ಅಂದ್ರೆ ನಿಮಗೆ ಮೊದಲು ನೆನಪಾಗುವ ಸಂಗತಿ ಯಾವುದು?**

ಭಾರತದ ಬಗ್ಗೆ ಯೋಚಿಸಿದಾಗ-ಯೋಚಿಸುವುದೇನು. ಅದು ಯಾವಾಗಲೂ ಇರುತ್ತೆ-ನನ್ನ ಮನಸ್ಸಿಗೆ ಮೊದಲು ಬರುವುದು ಸಾಂಸ್ಕೃತಿಕ ವೈವಿಧ್ಯತೆ, ಶ್ರೀಮಂತ ಇತಿಹಾಸ ಮತ್ತು ದೇಶದ ಹುರುಪಿನ ಜನ.. ●